## ಮಧ್ಯಂತರ ಅರ್ಜಿ ನಂ. 8 ರ ಮೇಲೆ ಆದೇಶ

1. ಅರ್ಜಿದಾರ/ವಾದಿಯು ಮಧ್ಯಂತರ ಅರ್ಜಿ ನಂ. 8 ನ್ನು ಸಲ್ಲಿಸಿ ದಾವಾಸ್ತಿ ಹಾಗೂ ಪ್ರತಿವಾದಿಯರ ಆಸ್ತಿಯನ್ನು ಅಳತೆ ಮಾಡಿ ದಾವಾಸ್ತಿಯಲ್ಲಾದ ಒತ್ತುವರಿ ಕುರಿತು ಹಾಗೂ ಪ್ರತಿವಾದಿ ಆಸ್ತಿಯ ಅಳತೆ ಕುರಿತು ವರದಿ ನೀಡಲು ಕೋರ್ಟ ಕಮಿಷನರ್ ಎಂದು ಎಡಿಎಲ್‌ಆರ್., ಅಂಕೋಲಾ ರವರನ್ನು ನೇಮಿಸುವಂತೆ ಪ್ರಸ್ತುತ ಅರ್ಜಿಯಲ್ಲಿ ವಿನಂತಿಸಿರುತ್ತಾರೆ.

2. ಸದರಿ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ನಿರಂತರ ಮನಾಯಿ ಸಲುವಾಗಿ ದಾವೆ ಸಲ್ಲಿಸಿದ ನಂತರ ಪ್ರತಿವಾದಿಯರು ದಾವಾಸ್ತಿ ಪೈಕಿ 2-ಗುಂಟೆ ಕ್ಷೇತ್ರವನ್ನು ಅತಿಕ್ರಮಿಸಿಕೊಂಡಿರುವುದು ಗಮನಕ್ಕೆ ಬಂದಿದ್ದು, ಈ ಕುರಿತು ವಾದಪತ್ರವನ್ನು ತಿದ್ದುಪಡಿ ಮಾಡಿ, ನಿರ್ದೇಶನಾತ್ಮಕ ಮನಾಯಿ ಕುರಿತು ಮಾಗಣಿ ಮಾಡಲಾಗಿರುತ್ತದೆ. ಕಾರಣ ಸದರಿ ದಾವಾಸ್ತಿಯಲ್ಲಿ ಪ್ರತಿವಾದಿ ಅತಿಕ್ರಮಿಸಿಕೊಂಡ ಆಸ್ತಿಯ ಖಚಿತತೆ ತಿಳಿಯದಿದ್ದರೆ, ವಾದಿ ಪಡೆಯುವ ಆದೇಶವನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲು ಅವಕಾಶವಿರುವುದಿಲ್ಲ. ಕಾರಣ ದಾವಾಸ್ತಿಯನ್ನು ಹಾಗೂ ಪ್ರತಿವಾದಿ ಆಸ್ತಿಯನ್ನು ಅಳತೆ ಮಾಡಿ, ಅತಿಕ್ರಮಣದ ಕುರಿತು ವರದಿ ಸಹಿತ ತಿಳಿಸಲು ಎಡಿಎಲ್‌ಆರ್., ಅಂಕೋಲಾ ರವರನ್ನು ಕೋರ್ಟ ಕಮೀಷನರ್ ಎಂದು ನೇಮಿಸಬೇಕೆಂದು ಅರ್ಜಿಯಲ್ಲಿ ವಿನಂತಿಸಿರುತ್ತಾರೆ.

3. ಸದರಿ ಅರ್ಜಿಗೆ ಪ್ರತಿವಾದಿಯರು ತಕರಾರು ಸಲ್ಲಿಸಿರುವುದಿಲ್ಲ.

4. ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ...........

**ಅಂಶಗಳು**

1. ಮಧ್ಯಂತರ ಅರ್ಜಿ ನಂ. 8 ರಲ್ಲಿ ಕೇಳಿದ ಪರಿಹಾರ ಪಡೆಯಲು ವಾದಿ ಅರ್ಹಳಿರುತ್ತಾಳೆಯೇ?

2. ಯಾವ ಆದೇಶ ?

5. ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ಭಾಗಶಃ ಸಕಾರಾತ್ಮಕ
ಅಂಶ ನಂ. 2: ಅಂತಿಮ ಆದೇಶ
ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

**ಕಾರಣಗಳು**

6. **ಅಂಶ ನಂ.1:-** ಹೆಬ್ಬುಳ ಗ್ರಾಮದ ಬ್ಲಾಕ್ ನಂ. 14 ಹಿಸ್ಸಾ - 2 ವಿಸ್ತೀರ್ಣ 1-29-0 ಆಸ್ತಿಯ ಕಬ್ಜಾ ವಹಿವಾಟಿಗೆ ತೊಂದರೆ ಉಂಟುಪಡಿಸದಂತೆ ಹಾಗೂ ಪ್ರತಿವಾದಿಯರು ನಿರ್ಮಿಸಿದ ತಂತಿ ಬೇಲಿಯನ್ನು ತೆಗೆದು ಅತಿಕ್ರಮಿಸಿಕೊಂಡ 0-2-0 ಜಾಗೆಯನ್ನು ಹಿಂದಿರುಗಿಸುವಂತೆ ನಿರ್ದೇಶನಾತ್ಮಕ ಮನಾಯಿ ಕೇಳಿ ವಾದಿ

ದಾವೆಯಲ್ಲಿ ಮಾಗಣಿ ಮಾಡಿರುತ್ತಾರೆ. ಸದರಿ ದಾವೆಯಲ್ಲಿ ವಾದ –ವಿವಾದಕ್ಕಾಗಿ ನೇಮಿಸಿದಾಗ ಪ್ರಸ್ತುತ ಅರ್ಜಿ ಸಲ್ಲಿಸಿರುತ್ತಾರೆ.

7. ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ –26 ನಿಯಮ –9 ರಡಿಯಲ್ಲಿ ವಿವಾದದಲ್ಲಿರುವ ಸಂಗತಿಯ ಕುರಿತು ಸ್ಥಳ ತನಿಖೆಯ ಅವಶ್ಯಕತೆ ಇದೆ ಎಂದು ನ್ಯಾಯಾಲಯವು ಕಂಡುಕೊಂಡಲ್ಲಿ ಅಂತಹ ಸಮಯದಲ್ಲಿ ವರದಿಯನ್ನು ತರಿಸಿಕೊಂಡು ನಿರ್ಧರಿಸಲು ಅವಕಾಶವಿರುತ್ತದೆ.

8. ಸದರಿ ದಾವೆಯಲ್ಲಿ ಪ್ರತಿವಾದಿಯರು 0–2–0 ಜಮೀನನ್ನು ಅತಿಕ್ರಮಿಸಿ ತಂತಿ ಬೇಲಿ ಹಾಕಿರುತ್ತಾರೆಂದು ವಾದಿಯ ದಾವೆ ಇರುತ್ತದೆ. ಕಾರಣ ಸದರಿ ಸಂಗತಿಯನ್ನು ನಿರ್ಧರಿಸಲು ಮೋಜಣಿ ಇಲಾಖೆಯ ವರದಿಯ ಅವಶ್ಯಕತೆ ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ ಸದರಿ ಪ್ರತಿವಾದಿಯರ ಆಸ್ತಿಯನ್ನೂ ಸಹ ಮೋಜಣಿ ಮಾಡಬೇಕೆಂದು ಅರ್ಜಿಯಲ್ಲಿ ತಿಳಿಸಿದ್ದು, ದಾವೆಯಲ್ಲಿರುವ ವಿವಾದ್ಯದ ವಿಷಯವನ್ನು ನಿರ್ಧರಿಸಲು ಮಾತ್ರ ದಾವಾಸ್ತಿಯ ಕುರಿತು ಕೋರ್ಟ ಕಮಿಷನರ್ ವರದಿಯ ಅವಶ್ಯಕತೆ ಇರುವುದರಿಂದ ಅಂಶ ನಂ. 1 ಕ್ಕೆ **"ಭಾಗಶಃ ಸಕಾರಾತ್ಮಕ"** ಎಂದು ಉತ್ತರಿಸಿದ್ದೇನೆ.

9. **ಅಂಶ ನಂ. 2**:– ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

**ಆದೇಶ**

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ –26 ನಿಯಮ –9 ಮತ್ತು 10 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ನಂ. 8 ನ್ನು ಭಾಗಶಃ ಪುರಸ್ಕರಿಸಲಾಗಿದೆ.

ಎಡಿಎಲ್‌ಆರ್., ಅಂಕೋಲಾ ರವರನ್ನು ಕೋರ್ಟ ಕಮಿಷನರ್ ಎಂದು ಈ ಮೂಲಕ ನೇಮಿಸಿದ್ದು, ದಾವಾಸ್ತಿಯಲ್ಲಿ ಪ್ರತಿವಾದಿ ಒತ್ತುವರಿ ಮಾಡಿದ್ದರೆ ಆ ಕುರಿತು ನಕಾಶೆ ಸಹಿತ ವರದಿ ಸಲ್ಲಿಸಲು ಈ ಮೂಲಕ ಆದೇಶಿಸಲಾಗಿದೆ.

ಪಿಎಫ್ ನೀಡಿದರೆ ಕಮಿಷನ್ ವಾರಂಟ್ ಕಳಿಸಲು ಕಚೇರಿಗೆ ಈ ಮೂಲಕ ಆದೇಶಿಸಲಾಗಿದೆ.

ಪ್ರಕರಣವನ್ನು ನಂತರ ಕರೆಯಿರಿ.

Sd/-

**ಸಿವಿಲ್ ನ್ಯಾಯಾಧೀಶರು, ಅಂಕೋಲಾ.**